ಓ ಎಸ್ ನಂ.17/2022
ಪಿ.ಡಬ್ಲ್ಯೂ-1 ಶಾರದಾ ಗಂಡ ಮರುಳಪ್ಪ

(ಇಂದು ದಿನಾಂಕಃ **24-06-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

<u>ಮುಂದುವರೆದ ಪಾಟೀ ಸವಾಲುಃ ೧ನೇ ಪ್ರತಿವಾದಿ ಪರ ಶ್ರೀಮತಿ ಎ ಟಿ ಡಿ ವಕೀಲರಿಂದ.</u>

೧೫ ವರ್ಷದಿಂದ ನಾನು ನಮ್ಮ ತಂದೆ-ತಾಯಿ ಸಂಪರ್ಕದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ರಾಯಚೂರಿನಲ್ಲಿರುವ ಮನೆಯನ್ನು ನಮ್ಮ ತಾಯಿ ನನಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆ ೨೦ ಇಂಟು ೨೧ ಅಡಿ ಇದ್ದು, ಅದನ್ನು ನಾನು ಎಂಟು ಲಕ್ಷ ರೂಪಾಯಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ರಾಯಚೂರನಲ್ಲಿದ್ದ ಚಂದ್ರಶೇಖರವರ ಹೆಸರಿನಲ್ಲಿರುವ ಪ್ಲಾಟನ್ನು ಚಂದ್ರಶೇಖರರವರು ಮಾರಾಟ ಮಾಡಲು ಹದಿನಾರು ಲಕ್ಷ ರೂಪಾಯಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ೧ನೇ ಪ್ರತಿವಾದಿ ಪಾಲಿಗೆ ಹಳೆಯ ಮನೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ೧೯ ಎಕರೆ ೪ ಗುಂಟೆ ಜಮೀನು ಪಾಲಿನಲ್ಲಿ ೧ನೇ ಪ್ರತಿವಾದಿಗೆ ಹೋಗಿದೆ ಎಂದರೆ ಸರಿಯಲ್ಲ. ನನ್ನ ತಮ್ಮ ಚಂದ್ರಶೇಖರವರಿಗೆ ಪಾಲಿನಲ್ಲಿ ೯ ಎಕರೆ ಜಮೀನು ಹೋಗಿರುತ್ತದೆ ಎಂದರೆ ಸರಿಯಲ್ಲ.

೨. ಜಮೀನು ಸ್ವಾಧೀನದ ಪರಿಹಾರ ಹಣದಲ್ಲಿ ೧ನೇ ಪ್ರತಿವಾದಿ ತನ್ನ ಮಗಳ ಮದುವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ೧ನೇ ಪ್ರತಿವಾದಿ ಮಗನ ಮದುವೆ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕಲಬುರಗಿಯಲ್ಲಿರುವ ಆದರ್ಶ ನಗರದಲ್ಲಿರುವ ಮನೆ ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಯು ಅದು ನಮ್ಮ ತಂದೆ ಖರೀದಿಸಿದ ಅವರ ಸ್ವಯಾರ್ಜಿತ ಆಸ್ತಿ ಇದೆ ಎನ್ನುತ್ತಾರೆ. ನಮ್ಮ ತಂದೆಯ ಜೊತೆ ೧ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಮಕ್ಕಳು ವಾಸ ಇರುತ್ತಾರೆ ಎಂದರೆ ಸರಿ. ೧ನೇ ಪ್ರತಿವಾದಿ ನಮ್ಮ

ತಂದೆ-ತಾಯಿಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಮ್ಮ ಚಂದ್ರಶೇಖರರವರು ಜೀವಿತಾ ಇರುವಾಗ ಶಾಹಬಜಾರ ನಾಕಾ ಕಲಬುರಗಿಯಲ್ಲಿ ವಾಸ ಇದ್ದರು ಎಂದರೆ ಸರಿ. ಚಂದ್ರಶೇಖರರವರ ಹೆಸರಿನಲ್ಲಿ ಕಲಬುರಗಿಯ ಗ್ರೀನ್ ಸಿಟಿಯಲ್ಲಿ ಪ್ಲಾಟ ಇದೆ ಎಂದರೆ ಸಾಕ್ಷಿಯು ಇರಬಹುದು ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

೩. ನಮ್ಮ ತಂದೆ ಚಂದ್ರಶೇಖರರವರ ಹೆಸರಿನಲ್ಲಿ ಒಂದು ಪ್ಲಾಟ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಾನು ಪಿತ್ರಾರ್ಜಿತ ಆಸ್ತಿ ಸಲುವಾಗಿ ಮಾತ್ರ ಕೇಸು ಹಾಕಿರುತ್ತೇನೆ ಎನ್ನುತ್ತಾರೆ. ಚಂದ್ರಶೇಖರರವರ ಹೆಸರಿನಲ್ಲಿ ಇದ್ದ ಪ್ಲಾಟ ನಂಬರ ೬೦ ಕೂಡಾ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ನನಗೆ ಈಗಾಗಲೆ ಪ್ಲಾಟ ನೀಡಿದ್ದರೂ ಸಹ ನಾನು ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸಾಕ್ಷಿಯು ಅದು ಖರೀದಿ ಆಗಿರುತ್ತದೆ ಎನ್ನುತ್ತಾರೆ. ನನ್ನ ಗಂಡನ ಹೆಸರಿನಲ್ಲಿ ಖರೀದಿ ಪತ್ರ ಮಾಡಿ ಪ್ಲಾಟನ್ನು ನನಗೆ ನೀಡಿದ್ದರೂ ಸಹ ನಾನು ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ೧ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಒಂದು ಸುಳ್ಳು ಕೇಸನ್ನು ನಾನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈಗಾಗಲೇ ನಮ್ಮ ನಡುವೆ ಪಾಲು ಆಗಿದ್ದರೂ ಸಹ ನಾನು ೧ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನ್ನನ ಮುಖ್ಯ ವಿಚಾರಣೆಯ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.